ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

## ಅಂಧ ಉದ್ಯೋಗ ಜನಕನ ಸಾಹಸಗಾಥೆ

■ ನೇಮಿಚಂದ್ರ

ಕಲೆ: ಮನೋಹರ ಕೆ. ಆಚಾರ್ಯ



### ಹೆಜ್ಜೆ ಮೂಡದ ಹಾದಿಯಲ್ಲಿ ಹತ್ತಿದ 'ಎನ್‌.ಎ.ಬಿ.' ಬೆಳಕು

ಹೋರಾಟದ ಹಾದಿಯಲ್ಲಿ ಭಾವೇಶರ ಕವಿ ಹೃದಯ ತುಡಿದಿತ್ತು:

ಕೌನ್ ಕೆಹತಾ ಹೈ, ಸಂಗ್ ದಿಲ್ ಕೊ ಅಷ್ಕ್ ನಹೀ ಹೋತೆ?
ಹಮನೆ ತೋ ಚಟ್ಟಾನೋ ಸೆ ಭೀ ಝರನೆ ನಿಕಲತೆ ದೇಖಾ ಹೈ
ಔರ್ ಕೌನ್ ಕಹತಾ ಹೈ, ತಕಲೀಫೋ ಸೆ ಖುಷಿಯಾ ನಹೀ ಮಿಲತೀ?
ಹಮನೆ ಕಾಂಟೋ ಪೆ ಗುಲಾಬೋ ಕೋ ಮೆಹಕತಾ ದೇಖಾ ಹೈ
ಕೌನ್ ಕೆಹತಾ ಹೈ, ಜಿಂದಗೀ ಮೆ ಆಗೆ ಬಢನೆ ಕೋ
ಕಂಧಾ ಕಿಸೀ ಕಾ ಚಾಹಿಯೆ ಹೀ – ಚಾಹಿಯೇ?
ಅರೆ, ಹಮನೇ ತೋ ಅಕ್ಸರ್ ಕಂಧೋ ಪೆ
ಸಿರ್ಫ್ ಜನಾಜೋಂ ಕೋ ನಿಕಲತೆ ದೇಖಾ ಹೈ
ಔರ್ ಕೌನ್ ಕೆಹತಾ ಹೈ ಮಿಟ್ಟೀ ಹೀ ಜೀವನ್ ಕಾ ಅಂತ್ ಹೈ?
ಹಮನೆ ತೋ ಕಯೀ ಮಜಾರೋಂ ಪೆ
ಅನ್ಗಿನತ್ ಫೂಲೋಂ ಕೋ ಖಿಲತೆ ದೇಖಾ ಹೈ
ಫೂಲೋಂ ಕೊ ಖಿಲತೆ ದೇಖಾ ಹೈ

(ಯಾರು ಹೇಳುತ್ತಾರೆ ಕಲ್ಲು ಹೃದಯದಲ್ಲಿ ಕಂಬನಿ ಜಿನುಗದೆಂದು?
ನಾನು ಕಠಿಣ ಬಂಡೆಗಳಿಂದಲೂ ಝರಿ ಹರಿಯುವುದನ್ನು ಕಂಡಿದ್ದೇನೆ.
ಯಾರು ಹೇಳುತ್ತಾರೆ ಕಷ್ಟಗಳಿಂದ ಖುಷಿ ಸಿಗುವುದಿಲ್ಲವೆಂದು?
ಮುಳ್ಳಿನ ನಡುವೆ ಗುಲಾಬಿಗಳು ಪರಿಮಳ ಪಸರಿಸುವುದನ್ನು ನಾನು ನೋಡಿದ್ದೇನೆ.
ಯಾರು ಹೇಳಿದ್ದು, ಬದುಕಲ್ಲಿ ಮುಂದೆ ಸಾಗಲು ಯಾರದಾದರೂ ಹೆಗಲು ಬೇಕೇ ಬೇಕೆಂದು?
ಅರೆ, ಹೆಗಲ ಮೇಲೆ ಬಹಳ ಬಾರಿ ನಾನು ಕಂಡದ್ದು ಮಸಣಕ್ಕೆ ಹೊರಟ ಹೆಣಗಳನ್ನಷ್ಟೆ.
ಮತ್ತೆ ಹೇಳಿದ್ದಾರು, ಹಿಡಿ ಮಣ್ಣಷ್ಟೇ ಜೀವನದ ಅಂತ್ಯ?
ನಾನು ಕಂಡಿದ್ದೇನೆ ಗೋರಿಗಳ ಮೇಲೂ ಅಗಣಿತ ಹೂಗಳು ಅರಳಿ ನಗುವುದನ್ನು, ಹೂಗಳು ಅರಳಿ ನಗುವುದನ್ನು.)

* * *

ಮಹಾಬಲೇಶ್ವರ ಪ್ರವಾಸಿ ತಾಣ. ಅಲ್ಲಿ ಯಾವ ಕಂಪನಿ, ಕಾರ್ಖಾನೆ, ಕಚೇರಿಗಳಿರಲಿಲ್ಲ. ಹಾಗಾಗಿ ಎಂ.ಎ. ಮುಗಿಸಿದ್ದರೂ, ಭಾವೇಶ್ ಅವರಿಗೆ ಅಲ್ಲಿ ಕೆಲಸ ಸಿಗುವುದು ಕಷ್ಟವಿತ್ತು. ಅಲ್ಲಿದ್ದ ವಿವಿಧ ಹೋಟೆಲುಗಳಿಗೆ ಹೋಗಿ, ಅಲ್ಲಿಯ ಮ್ಯಾನೇಜರುಗಳನ್ನು ಭೇಟ್ಟಿ ಮಾಡುತ್ತಿದ್ದರು. ಆದರೆ ಇವರ ಕುರುಡುತನದಿಂದಾಗಿ ಎಲ್ಲಿಯೂ ಕೆಲಸ ಸಿಗುತ್ತಿರಲಿಲ್ಲ. ಭಾವೇಶ್ ಅವರ ಕಣ್ಣುಗಳನ್ನಷ್ಟೇ ಅವರು ನೋಡುತ್ತಿದ್ದರು, ಅವರ ಸಾಮರ್ಥ್ಯವನ್ನಲ್ಲ. ಮೊದಮೊದಲು ಕಾಣುತ್ತಿದ್ದ ಒಂದಿಷ್ಟು ಮಬ್ಬು ಮಬ್ಬು ಬೆಳಕಿನ ಚಲನೆ ಕೂಡಾ ಭಾವೇಶ್‌ರ ಕಿಶೋರಾವಸ್ಥೆ ಕಳೆಯುತ್ತಿದ್ದಂತೆ ಕಾಣೆಯಾಗಿ, ಸಂಪೂರ್ಣ ಕುರುಡರಾಗಿದ್ದರು.

ಬಹಳ ಪ್ರಯತ್ನದ ನಂತರ 'ರೀಗಲ್ ಹೋಟೆಲ್'ನಲ್ಲಿ ಟೆಲಿಫೋನ್ ಆಪರೇಟರ್ ಕೆಲಸ ಸಿಕ್ಕಿತು. ಭಾವೇಶ್ ಈ ಕೆಲಸ ಎಂಟು ಇಲ್ಲವೇ ಹತ್ತು ಗಂಟೆಯದಾಗಿರುತ್ತದೆ